**Phone : 0824-2287824 / 2287281**
**E-mail : doorashikshana@gmail.com**

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

**ನಿರ್ದೇಶಕರ ಕಛೇರಿ**
**ದೂರ ಶಿಕ್ಷಣ ಕೇಂದ್ರ, ವಾಣಿಜ್ಯ ಸಂಕೀರ್ಣ**
**ಮಂಗಳಗಂಗೋತ್ರಿ, ಮಂಗಳೂರು–574 199**
**ದ. ಕ. ಜಿಲ್ಲೆ, ಕರ್ನಾಟಕ**

**Office of the Director**
**Centre for Distance Education**
**Shopping Complex, Mangalagangothri**
**Mangalore – 574 199, D.K. Karnataka**

ಸಂ: ಮಂ.ವಿ/ಬಿ.ಎಡ್.(ODL)/2022–23 ದಿನಾಂಕ: 30.09.2023

**ಇವರಿಗೆ,**

**ಶೈಕ್ಷಣಿಕ ವರ್ಷ 2020–21 ಬ್ಯಾಚ್‌ನ ದ್ವಿತೀಯ ಬಿ.ಎಡ್(ODL) ಪದವಿ ಕಾರ್ಯಕ್ರಮದ ಪುನರಾವರ್ತಿತ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ.**

**ವಿಷಯ:** ಶೈಕ್ಷಣಿಕ ವರ್ಷ 2020–21 ಬ್ಯಾಚ್‌ನ ದ್ವಿತೀಯ ಬಿ.ಎಡ್.(ODL) ಪದವಿ ಕಾರ್ಯಕ್ರಮದ ಪುನರಾವರ್ತಿತ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಗೆ(Practical Examination) ಹಾಜರಾಗುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕಾರ್ಯಕ್ರಮದ ಶೈಕ್ಷಣಿಕ ವರ್ಷ 2020–21 ಬ್ಯಾಚ್‌ನ ದ್ವಿತೀಯ ಬಿ.ಎಡ್.(ODL) ಪದವಿ ಕಾರ್ಯಕ್ರಮದ ಪುನರಾವರ್ತಿತ ವಿದ್ಯಾರ್ಥಿಗಳಿಗೆ Pedagogy-I ಮತ್ತು Pedagogy-II ವಿಷಯಗಳಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು(Practical Examination) ಕೆಳಗೆ ನಮೂದಿಸಿರುವ ಪರೀಕ್ಷಾ ಕೇಂದ್ರ ಮತ್ತು ದಿನಾಂಕದಂದು ಆಯೋಜಿಸಲಾಗುತ್ತಿದ್ದು ಈ ಕೆಳಗಿನ ಸೂಚನೆಗಳ ಪ್ರಕಾರ ಈ ಕೆಳಗಿನ ಪರೀಕ್ಷಾ ಕೇಂದ್ರಕ್ಕೆ ತಪ್ಪದೇ ಹಾಜರಾಗುವಂತೆ ಈ ಮೂಲಕ ತಿಳಿಸಲಾಗಿದೆ. ನಿಯಮದಂತೆ ದ್ವಿತೀಯ ವರ್ಷದ ಸಂಪರ್ಕ ಕಾರ್ಯಕ್ರಮದಲ್ಲಿ ಶೇ. 80% ರಷ್ಟು ಹಾಜರಾತಿ ಇರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರಾಯೋಗಿಕ ಪರೀಕ್ಷೆ ಮತ್ತು ಅಂತಿಮ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ.

| Date | Subject | Time | Examination Centre and Address |
|---|---|---|---|
| 16.10.2023 | Pedagogy-I<br>Pedagogy-II | 10:00 AM to 5:30 PM<br><br>(1:00 PM to 2:00 PM Lunch Break) | St. Aloysius Institute of Education<br>P.B. No: 720, Kodialbail,<br>Mangalore - 575 003 |

**ಸೂಚನೆಗಳು:**

1. ತಮಗೆ ನಿಗದಿಪಡಿಸಿರುವ ಪರೀಕ್ಷಾ ದಿನಾಂಕಗಳಂದು ಪೂರ್ವಾಹ್ನ 9:30 ಗಂಟೆಗೆ ಪರೀಕ್ಷಾ ಕೇಂದ್ರದ ಕೊಠಡಿಯಲ್ಲಿ ಹಾಜರಿರುವುದು. ತದನಂತರ ಬಂದ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರದ ಕೊಠಡಿಯ ಒಳಗೆ ಪ್ರವೇಶವಿರುವುದಿಲ್ಲ.

2. ಪ್ರತೀ ವಿದ್ಯಾರ್ಥಿಯು ತಾವು ಆಯ್ಕೆ ಮಾಡಿಕೊಂಡಿರುವ **Pedagogy-I (ಒಂದು ಪಾಠ ಯೋಜನೆ – ಎರಡು ಪ್ರತಿ) ಮತ್ತು Pedagogy-II (ಒಂದು ಪಾಠ ಯೋಜನೆ – ಎರಡು ಪ್ರತಿ)** ವಿಷಯಗಳಲ್ಲಿ ನಿಗದಿತ ನಮೂನೆಯ (ತಮ್ಮ ಅಧ್ಯಯನ ಕೇಂದ್ರಗಳಿಂದ ನೀಡಲಾಗಿರುವ ಅಥವಾ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ನಮೂನೆ) ಕೈಬರಹದಲ್ಲಿ (Manuscript) ಪಾಠ ಯೋಜನೆ (Lesson Plan) ಗಳನ್ನು ತಯಾರಿಸುವುದು.
3. ಪ್ರತೀ ವಿದ್ಯಾರ್ಥಿಯು ತಮ್ಮ Pedagogy-I ಮತ್ತು Pedagogy-II ವಿಷಯಗಳಲ್ಲಿ ಪ್ರಾಯೋಗಿಕ ಪರೀಕ್ಷೆಗೆ ವಿಷಯಗಳನ್ನು ಎಂಟು, ಒಂಭತ್ತು ಅಥವಾ ಹತ್ತನೇ ತರಗತಿಯ ಪಠ್ಯಕ್ರಮದಿಂದ ಆಯ್ಕೆಮಾಡಿ ಸಿದ್ಧಪಡಿಸಿಕೊಳ್ಳುವುದು.
4. ದೂರ ಶಿಕ್ಷಣ ಕೇಂದ್ರದಿಂದ ಪ್ರವೇಶಾತಿಯ ಸಂದರ್ಭದಲ್ಲಿ ತಮಗೆ ನೀಡಿರುವ **ಗುರುತಿನ ಚೀಟಿ(Identity Card) ಮತ್ತು ಪ್ರಾಯೋಗಿಕ ಪರೀಕ್ಷೆಯ ಬಗ್ಗೆ ತಮಗೆ ಅಂಚೆಯ ಮೂಲಕ ಕಳುಹಿಸಲಾದ ಸೂಚನಾ ಪತ್ರವನ್ನು ಕಡ್ಡಾಯವಾಗಿ ತಮ್ಮ ಕೊಠಡಿಯ ಪರೀಕ್ಷಕರುಗಳಿಗೆ ತೋರಿಸಿ ಅವರು ಅನುಮತಿ ನೀಡಿದ ನಂತರ ಪಾಠವನ್ನು ನೀಡುವುದು.**
5. ಈ ಪ್ರಾಯೋಗಿಕ ಪರೀಕ್ಷಾ ಪ್ರವೇಶ ಪತ್ರ ಮತ್ತು ಗುರುತಿನ ಚೀಟಿ(Identity Card) ಯನ್ನು **ಹಾಜರುಪಡಿಸದ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ.**
6. ತಮಗೆ ನಿಯೋಜನೆ ಆಗಿರುವ ಪರೀಕ್ಷಾ ಕೇಂದ್ರದ ಕೊಠಡಿಯಲ್ಲಿನ ಎಲ್ಲಾ ವಿದ್ಯಾರ್ಥಿ ಶಿಕ್ಷಕ–ಶಿಕ್ಷಕಿಯರ ಪಾಠಗಳನ್ನು ಕಡ್ಡಾಯವಾಗಿ ಸಹ ವಿದ್ಯಾರ್ಥಿ/ವಿದ್ಯಾರ್ಥಿನಿಯರ ರೂಪದಲ್ಲಿ ಭಾಗವಹಿಸುವುದು.
7. ಸದರಿ ಪರೀಕ್ಷಾ ದಿನಾಂಕಗಳಂದು ವಿದ್ಯಾರ್ಥಿ ಶಿಕ್ಷಕ–ಶಿಕ್ಷಕಿಯರು ಪರೀಕ್ಷಾ ಕೊಠಡಿ ಪರೀಕ್ಷಕರ Entry & Exit ಫಾರಂನ ಎರಡೂ ಕಾಲಂಗಳಲ್ಲಿ ಸಹಿ ಮಾಡಿದ ನಂತರವೇ ಅಂದಿನ ತಮ್ಮ ಪ್ರಾಯೋಗಿಕ ಪರೀಕ್ಷೆಯ ಹಾಜರಾತಿಯನ್ನು ಪರಿಗಣಿಸಲಾಗುವುದು.
8. Pedagogy-I ಮತ್ತು Pedagogy-II ವಿಷಯಗಳ ಪಾಠ ನೀಡುವಿಕೆಯ ಗರಿಷ್ಟ ಅವಧಿ 30 ನಿಮಿಷಗಳಾಗಿರುತ್ತದೆ.
9. ವಿದ್ಯಾರ್ಥಿ ಶಿಕ್ಷಕ–ಶಿಕ್ಷಕಿಯರು Pedagogy-I ಮತ್ತು Pedagogy-II ವಿಷಯಗಳಲ್ಲಿ ಪಾಠ ನೀಡುವ ಸಂದರ್ಭದಲ್ಲಿ ತಲಾ ಎರಡು ಬೋಧನಾ ಉಪಕರಣಗಳನ್ನು(Teaching Aids) ಬಳಸುವುದು ಕಡ್ಡಾಯವಾಗಿರುತ್ತದೆ.

**ಸಹಿ/–**
**ನಿರ್ದೇಶಕರು**